# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಅಡಗೂರು ಹೆಚ್ ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **899** |
| **ಉತ್ತರಿಸಬೇಕಾದ ದಿನಾಂಕ** | : | **17-12-2024** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಈವರೆಗೆ ಎಷ್ಟು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳು ನೋಂದಣಿಯಾಗಿದೆ: ಎಷ್ಟು ಸೌಹಾರ್ದ ಸೊಸೈಟಿಗಳಿಗೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ. | ರಾಜ್ಯದಲ್ಲಿ ದಿನಾಂಕ 30.11.2024 ರ ಅಂತ್ಯಕ್ಕೆ ಒಟ್ಟು 4799 ಕ್ರೆಡಿಟ್ ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತವೆ.<br>ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 38ರಂತೆ ಸಂಯುಕ್ತ ಸಹಕಾರಿಯಿಂದ ಯಾವುದೇ ಸಹಕಾರಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವುದಿಲ್ಲ. ಆದರೆ ಪ್ರಾಥಮಿಕ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಕೋರಂ ಕೊರತೆಯ ಹಿನ್ನೆಲೆಯಲ್ಲಿ ಹಾಗೂ ಸಹಕಾರಿಯಲ್ಲಿ ಸಂವಿಧಾನಿಕ ಬಿಕ್ಕಟ್ಟು ಉಂಟಾದ ಸಮಯದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಪ್ರಕರಣ 38ಎ ರನ್ವಯ ಚುನಾವಣಾ ಕಾರ್ಯಗಳನ್ನು ನಿರ್ವಹಿಸಲು ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದ್ದು ಪ್ರಸ್ತುತ ರಾಜ್ಯದಲ್ಲಿ ಒಟ್ಟು 28 ಕ್ರೆಡಿಟ್ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. |
| ಆ) | ಎಷ್ಟು ಸೌಹಾರ್ದ ಸೊಸೈಟಿಗಳಲ್ಲಿ ಅವ್ಯವಹಾರ ನಡೆದಿರುವುದು, ಯಾವುದು: ನಡೆದಿದ್ದರೆ ಒಟ್ಟಾರೆ ಎಷ್ಟು ಹಣ, ಅವುಗಳ ಹೆಸರು, ಎಷ್ಟು ಹಣ ದುರುಪಯೋಗವಾಗಿದೆ: ಎಂಬುವುದರ ಮಾಹಿತಿ ನೀಡುವುದು. | ಒಟ್ಟು 27 ಸೌಹಾರ್ದ ಸಹಕಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಕಂಡುಬಂದಿದೆ. ಇದರ ಒಟ್ಟು ಮೊತ್ತ ಪರಿವೀಕ್ಷಣೆ ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ವಿಚಾರಣಾ ವರದಿಯನುಸಾರ ರೂ.2540,91,96,199.15/-ಗಳಷ್ಟು ಅವ್ಯವಹಾರವಾಗಿದ್ದು, ಹಣ ದುರುಪಯೋಗ ಗೊಂಡ ಸೌಹಾರ್ದ ಸಹಕಾರಿಗಳ ಹೆಸರು ಮತ್ತು ಹಣ ದುರುಪಯೋಗದ ಮೊತ್ತದ ಕುರಿತು ವಿವರಗಳನ್ನು **ಅನುಬಂಧ-'ಅ'** ರಲ್ಲಿ ನೀಡಲಾಗಿದೆ. |

| | | |
|---|---|---|
| ಇ) | ಈವರೆಗೆ ಸೌಹಾರ್ದ ಕಾಯಿದೆ ಸೆಕ್ಷನ್ 35ರಲ್ಲಿ ಎಷ್ಟು ಸಂಸ್ಥೆಗಳ ಮೇಲೆ ತನಿಖೆಯಾಗಿದೆ; ಎಷ್ಟು ವಸೂಲಿ ಆಗಿದೆ: ತಪ್ಪಿತಸ್ಥರ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ; | ಈವರೆಗೆ ಸೌಹಾರ್ದ ಸಹಕಾರಿ ಕಾಯ್ದೆ ಸೆಕ್ಷನ್ 35ರಲ್ಲಿನ ವಿಚಾರಣೆಗೆ ಸಂಬಂಧಿಸಿದ ಮಾಹಿತಿ ಹಾಗೂ ತನಿಖೆಗಳ ವಿವರಗಳನ್ನು **ಅನುಬಂಧ "ಆ"** ರಲ್ಲಿ ನೀಡಲಾಗಿದೆ. |
| ಈ) | ಸರ್ಕಾರದ ಒಡೆತನದಲ್ಲಿ ಇರುವ ಕ್ರೆಡಿಟ್ ಸೊಸೈಟಿ/ ಬ್ಯಾಂಕ್‌ಗಳಲ್ಲಿಯೇ ಅವ್ಯವಹಾರ ಆಗುತ್ತಿದ್ದು, ಸರ್ಕಾರದ ನಿಯಂತ್ರಣ ಇಲ್ಲದ ಸೌಹಾರ್ದ ಸೊಸೈಟಿಗಳಲ್ಲಿ ಅವ್ಯವಹಾರ ತಡೆಯಲು ಸಾಧ್ಯವೇ; | ➢ ಸರ್ಕಾರದ ಒಡೆತನದಲ್ಲಿ ನೇರವಾಗಿ ಯಾವುದೇ ಕ್ರೆಡಿಟ್ ಸೊಸೈಟಿ/ ಬ್ಯಾಂಕ್‌ಗಳು ಇರುವುದಿಲ್ಲ.<br>➢ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ವಿವಿಧ ಪ್ರಕಾರದ ಸಹಕಾರ ಸಂಘಗಳು/ ಸಹಕಾರ ಬ್ಯಾಂಕ್‌ಗಳು ನೋಂದಣಿಗೊಂಡಿವೆ.<br><br>**ಸಹಕಾರ ಸಂಘಗಳು/ ಸಹಕಾರ ಬ್ಯಾಂಕುಗಳು/ ಸೌಹಾರ್ದ ಸಹಕಾರಿಗಳಲ್ಲಿನ ಅವ್ಯವಹಾರ ತಡೆಯಲು ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ:-**<br><br>➢ ಸರ್ಕಾರದಿಂದ ಮತ್ತು ಸಹಕಾರ ಸಂಘಗಳ ನಿಬಂಧಕರ ಕಛೇರಿಯಿಂದ ಕಾಲಕಾಲಕ್ಕೆ ಅಧಿಸೂಚನೆ/ ಸುತ್ತೋಲೆಗಳ ಮೂಲಕ ಸಹಕಾರ ಸಂಘಗಳು/ ಬ್ಯಾಂಕುಗಳ ವ್ಯವಹಾರದಲ್ಲಿ ಪಾರದರ್ಶಕತೆ, ಗುಣಮಟ್ಟವನ್ನು ಹೆಚ್ಚಿಸಲು ನಿರ್ದೇಶನ/ ಮಾರ್ಗದರ್ಶನ ನೀಡಲಾಗುತ್ತಿದೆ.<br>➢ ಪ್ರಸ್ತುತ ಇರುವ ಕಾಯ್ದೆಯಲ್ಲಿನ ಅವಕಾಶಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕಟ್ಟುನಿಟ್ಟಿನ ನಿರ್ದೇಶನಗಳನ್ನು ಇಲಾಖಾಧಿಕಾರಿಗಳಿಗೆ ನೀಡಲಾಗಿದೆ.<br>➢ ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಒ: 48 ಸಿಎಲ್‌ಎಂ:2022(ಇ) ಬೆಂಗಳೂರು. ದಿನಾಂಕ. 15-07-2023 ರನ್ವಯ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಲ್ಲಿ ಹಾಗೂ ಸೌಹಾರ್ದ ಸಹಕಾರಿ ಸಂಘಗಳಲ್ಲಿ ಹಣದುರುಪಯೊಗ ಪ್ರಕರಣಗಳು ಬೆಳಕಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಸಹಕಾರ ಸಂಘಗಳ ನಿಯಮಗಳು 1960 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004 ಗಳಿಗೆ ತಿದ್ದುಪಡಿ ತರುವ ಸಂಬಂಧ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸಹಕಾರ ಕ್ಷೇತ್ರದಲ್ಲಿ ಅನುಭವವುಳ್ಳ ಮಾನ್ಯ |

| | | |
|---|---|---|
| | | ಶಾಸಕರು, ಹಿರಿಯ ಸಹಕಾರಿಗಳು ಹಾಗೂ ನಿವೃತ್ತ ಅಧಿಕಾರಿಗಳನ್ನೊಳಗೊಂಡಂತೆ ಮಾನ್ಯ ಶಾಸಕರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ರವರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ವರದಿಗಳನ್ನು ಸಲ್ಲಿಸಿರುತ್ತದೆ.<br><br>➢ ಸದರಿ ಸಮಿತಿಯ ಮಧ್ಯಂತರ ವರದಿಯನ್ನಾಧರಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಾಯ್ದೆಗಳಿಗೆ ಕೆಲವೊಂದು ತಿದ್ದುಪಡಿ ತರಲು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2024 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ 2024 ಗಳನ್ನು ವಿಧಾನ ಮಂಡಲದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ.<br><br>➢ ಅಧ್ಯಯನ ಸಮಿತಿಯು ಸಲ್ಲಿಸಿದ ಪೂರ್ಣ ವರದಿಯನ್ನಾಧರಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಾಯ್ದೆಗಳಿಗೆ ಅಗತ್ಯ ತಿದ್ದುಪಡಿಗಳನ್ನು ತರಲು ಕ್ರಮವಹಿಸಲಾಗುತ್ತಿದೆ. |
| ಉ) | ಸರ್ಕಾರದ ಅಧೀನದಲ್ಲಿ ಇರುವ ಸಹಕಾರಿ ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಿರುವಾಗ ಸಾರ್ವಜನಿಕರ ದುಡ್ಡನ್ನು ದುರುಪಯೋಗ ನಡೆಸುತ್ತಿರುವ ಖಾಸಗಿ ಸೌಹಾರ್ದದ ಸೊಸೈಟಿಗಳ ಅವಶ್ಯಕತೆ ಇದೆಯೇ? ವಿವರಿಸುವುದು. | ಸರ್ಕಾರದ ಹಸ್ತಕ್ಷೇಪ ತಡೆಯಬಲ್ಲ, ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ, ಸದಸ್ಯರ ಸಹಭಾಗಿತ್ವ ಹೆಚ್ಚಿಸುವ, ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಯೋಜನಾ ಆಯೋಗ ರೂಪಿಸಿದ ಮಾದರಿ ಸಹಕಾರಿ ಕಾಯ್ದೆಗನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997" ಜನವರಿ 2001 ರಿಂದ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರಿಂದ ಜಾರಿಯಲ್ಲಿರುತ್ತದೆ.<br><br>ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಡಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಅವ್ಯವಹಾರದ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಇದನ್ನು ತಡೆಗಟ್ಟಲು ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ:- |

| | | |
|---|---|---|
| | | ➢ ಕರ್ನಾಟಕ ಸೌಹಾರ್ದ (ತಿದ್ದುಪಡಿ) ವಿಧೇಯಕ 2024 ರಲ್ಲಿ ಪ್ರಕರಣ 33ಕ್ಕೆ ತಿದ್ದುಪಡಿ ತಂದು ಪ್ರತಿಯೊಂದು ಸೌಹಾರ್ದ ಸಹಕಾರಿಯು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಲೆಕ್ಕಪರಿಶೋಧಕರಿಂದ ಮೂರು ವರ್ಷಗಳಲ್ಲಿ ಒಂದು ಬಾರಿ ತನ್ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಿಸುವುದನ್ನು ಕಡ್ಡಾಯಗೊಳಿಸಲು ಪ್ರಸ್ತಾಪಿಸಲಾಗಿದೆ.<br><br>➢ ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಒ: 48 ಸಿಎಲ್‌ಎಂ:2022(ಇ), ದಿ:15-07-2023 ರನ್ವಯ ಸೌಹಾರ್ದ ಸಹಕಾರಿ ಸಂಘಗಳಲ್ಲಿ ಹಣದುರುಪಯೋಗ ಪ್ರಕರಣಗಳು ಬೆಳಕಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004 ಗಳಿಗೆ ತಿದ್ದುಪಡಿ ತರುವ ಸಂಬಂಧ ರಚಿಸಿದ ಅಧ್ಯಯನ ಸಮಿತಿಯು, ತನ್ನ ವರದಿಯನ್ನು ನೀಡುತ್ತಾ ದೇಶದ ಇತರೆ ರಾಜ್ಯಗಳಲ್ಲಿ ಸೌಹಾರ್ದ ಸಹಕಾರಿಗಳ ನಿಯಂತ್ರಣದ ಕುರಿತು, ಕಾಯ್ದೆಯನ್ನು ರಿಪೀಲ್ ಮಾಡಿದ ಕುರಿತು, ಕಾಯ್ದೆಯನ್ನು ನಿರಸನಗೊಳಿಸಿರುವ ಕುರಿತು ಅಧ್ಯಯನ ಮಾಡಿ ಸಹಕಾರಿಗಳ ಬಂಡವಾಳದ ಸದ್ಬಳಕೆ, ಠೇವಣಿದಾರರ ಭದ್ರತೆ ಅವರ ಹಿತರಕ್ಷಣೆಯನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತು ಸೌಹಾರ್ದ ಸಹಕಾರಿಗಳ ವ್ಯವಹಾರಗಳು ಪಾರದರ್ಶಕವಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಸೂಕ್ತ ತಿದ್ದುಪಡಿಗಳನ್ನು ಕಾಯ್ದೆಯಲ್ಲಿ ತರಲು ಶಿಫಾರಸ್ಸು ಮಾಡಿರುತ್ತದೆ.<br><br>➢ ಸರ್ಕಾರದ ಆದೇಶ ಸಂಖ್ಯೆ: ಸಿಒ 38 ಸಿಎಲ್‌ಎಂ 2024, ದಿ: 16.03.2024 ರ ಮೂಲಕ ಸೌಹಾರ್ದ ಸಹಕಾರಿ ಸದಸ್ಯ ಠೇವಣಿದಾರರ, ಸಾಲಗಾರರ ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಮತ್ತು ಸೌಹಾರ್ದ ಸಹಕಾರಿಗಳ ಗುಣಮಟ್ಟದ ಅಭಿವೃದ್ಧಿಗಾಗಿ ನಿರ್ದೇಶನಗಳನ್ನು ನೀಡಿ ಆದೇಶಿಸಲಾಗಿದೆ. |

| | | |
|---|---|---|
| | | ಸದರಿ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ರಾ<br>ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂ<br>ಇವರು ರಿಟ್ ಅರ್ಜಿ ಸಂಖ್ಯೆ: 9832/2024 ನ<br>ದಾಖಲಿಸಿದ್ದು, ಪ್ರಸ್ತುತ ಸದರಿ ಆದೇಶಕ್ಕೆ ಮಾನ<br>ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. |

**ಸಂಖ್ಯೆ: ಸಿಒ 104 ಪಿಎಂಸಿ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮ ನಿರ್ದೇಶನ ಹೊಂದಿದವರು) ಇವರ ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 872(899)ಕ್ಕೆ ಉತ್ತರ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | **ರಾಜ್ಯದಲ್ಲಿ ಈವರೆಗೆ ಎಷ್ಟು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳು ನೊಂದಾಣಿಯಾಗಿದೆ: ಎಷ್ಟು ಸೌಹಾರ್ದ ಸೊಸೈಟಿಗಳಿಗೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ.** | ರಾಜ್ಯದಲ್ಲಿ ದಿನಾಂಕ 30.11.2024ರ ಅಂತ್ಯಕ್ಕೆ ಒಟ್ಟು: 4799 ಕ್ರೆಡಿಟ್ ಸೌಹಾರ್ದ ಸಹಕಾರಿಗಳು ನೊಂದಣಿಯಾಗಿರುತ್ತವೆ.<br>ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 38ರಂತೆ ಸಂಯುಕ್ತ ಸಹಕಾರಿಯಿಂದ ಯಾವುದೇ ಸಹಕಾರಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವುದಿಲ್ಲ. ಆದರೆ ಪ್ರಾಥಮಿಕ ಸೌಹಾರ್ದ ಸಹಕಾರಿಗಳ ಆಢಳಿತ ಮಂಡಲಿಯ ಕೊರಂ ಕೊರತೆಯ ಹಿನ್ನಲೆಯಲ್ಲಿ ಹಾಗೂ ಸಹಕಾರಿಯಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾದ ಸಮಯದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಪ್ರಕರಣ 38ಎ ರನ್ವಯ ಚುನಾವಣಾ ಕಾರ್ಯಗಳನ್ನು ನಿರ್ವಹಿಸಲು ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದ್ದು ಪ್ರಸ್ತುತ ರಾಜ್ಯದಲ್ಲಿ ಒಟ್ಟು 28 ಕ್ರೆಡಿಟ್ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಆ. | **ಎಷ್ಟು ಸೌಹಾರ್ದ ಸೊಸೈಟಿಗಳಲ್ಲಿ ಅವ್ಯವಹಾರ ನಡೆದಿರುವುದು ಯಾವುದು: ನಡೆದಿದ್ದರೆ ಒಟ್ಟಾರೆ ಎಷ್ಟು ಹಣ, ಅವುಗಳ ಹೆಸರು, ಎಷ್ಟು ಹಣ ದುರುಪಯೋಗವಾಗಿದೆ: ಎಂಬುವುದರ ಮಾಹಿತಿ ನೀಡುವುದು.** | ಒಟ್ಟು 27 ಸೌಹಾರ್ದ ಸಹಕಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಕಂಡುಬಂದಿದೆ. ಇದರ ಒಟ್ಟು ಮೋತ್ತ ಪರಿವೀಕ್ಷಣೆ ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ವಿಚಾರಣಾ ವರದಿಯನುಸಾರ ರೂ.2471,89,89,618/-ಗಳಷ್ಟು ಅವ್ಯವಹಾರವಾಗಿದ್ದು, ಹಣದುರುಪಯೋಗಗೊಂಡ ಸೌಹಾರ್ದ ಸಹಕಾರಿಗಳ ಹೆಸರು ಮತ್ತು ಹಣದುರುಪಯೋಗದ ಮೊತ್ತದ ಕುರಿತು ವಿವರಗಳನ್ನು **ಅನುಬಂಧ-'ಅ'** ರಲ್ಲಿ ಲಗತ್ತಿಸಲಾಗಿದೆ. |

| | | |
|---|---|---|
| ಇ. | **ಈವರೆಗೆ ಸೌಹಾರ್ದ ಕಾಯಿದೆ ಸೆಕ್ಷನ್ 35ರಲ್ಲಿ ಎಷ್ಟು ಸಂಸ್ಥೆಗಳ ಮೇಲೆ ತನಿಖೆಯಾಗಿದೆ. ಎಷ್ಟು ವಸೂಲಿ ಆಗಿದೆ: ತಪ್ಪಿತಸ್ಥರ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ.** | ಈವರೆಗೆ ಸೌಹಾರ್ದ ಸಹಕಾರಿ ಕಾಯಿದೆ ಸೆಕ್ಷನ್ 35ರಲ್ಲಿನ ವಿಚಾರಣೆಗೆ ಸಂಬಂಧಿಸಿದ ಮಾಹಿತಿ ಹಾಗೂ ತನಿಖೆಗಳ ವಿವರಗಳನ್ನು **ಅನುಬಂಧ "ಆ"** ರಲ್ಲಿ ಲಗತ್ತಿಸಿದೆ. |
| ಈ. | **ಸರ್ಕಾರದ ಒಡೆತನದಲ್ಲಿ ಇರುವ ಕ್ರೆಡಿಟ್ ಸೊಸೈಟಿ/ ಬ್ಯಾಂಕ್‌ಗಳಲ್ಲಿಯೇ ಅವ್ಯವಹಾರ ಆಗುತ್ತಿದ್ದು, ಸರ್ಕಾರದ ನಿಯಂತ್ರಣ ಇಲ್ಲದ ಸೌಹಾರ್ದ ಸೊಸೈಟಿಗಳಲ್ಲಿ ಅವ್ಯವಹಾರ ತಡೆಯಲು ಸಾಧ್ಯವೆ:** | ➢ ಸರ್ಕಾರದ ಒಡೆತನದಲ್ಲಿ ನೇರವಾಗಿ ಯಾವುದೇ ಕ್ರೆಡಿಟ್ ಸೊಸೈಟಿ/ ಬ್ಯಾಂಕ್‌ಗಳು ಇರುವುದಿಲ್ಲ.<br>➢ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ವಿವಿಧ ಪ್ರಕಾರದ ಸಹಕಾರ ಸಂಘಗಳು/ ಸಹಕಾರ ಬ್ಯಾಂಕ್‌ಗಳು ನೋಂದಣಿಗೊಂಡಿವೆ.<br>**ಸಹಕಾರ ಸಂಘಗಳು/ ಸಹಕಾರ ಬ್ಯಾಂಕುಗಳು/ ಸೌಹಾರ್ದ ಸಹಕಾರಿಗಳಲ್ಲಿನ ಅವ್ಯವಹಾರ ತಡೆಯಲು ಸರ್ಕಾರದಿಂದ ಹಲವು ಕ್ರಮಗಳನ್ನು ವಹಿಸಿದೆ:-**<br>➢ ಸರ್ಕಾರದಿಂದ ಮತ್ತು ಸಹಕಾರ ಸಂಘಗಳ ನಿಬಂಧಕರ ಕಛೇರಿಯಿಂದ ಕಾಲಕಾಲಕ್ಕೆ ಅಧಿಸೂಚನೆ/ ಸುತ್ತೋಲೆಗಳ ಮೂಲಕ ಸಹಕಾರ ಸಂಘಗಳು/ ಬ್ಯಾಂಕುಗಳ ವ್ಯವಹಾರದಲ್ಲಿ ಪಾರದರ್ಶಕತೆ, ಗುಣಮಟ್ಟವನ್ನು ಹೆಚ್ಚಿಸಲು ನಿರ್ದೇಶನ/ ಮಾರ್ಗದರ್ಶನ ನೀಡಲಾಗುತ್ತಿದೆ.<br>➢ ಪ್ರಸ್ತುತ ಇರುವ ಕಾಯ್ದೆಯಲ್ಲಿನ ಅವಕಾಶಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕಟ್ಟುನಿಟ್ಟಿನ ನಿರ್ದೇಶನಗಳನ್ನು ಇಲಾಖಾಧಿಕಾರಿಗಳಿಗೆ ನೀಡಲಾಗಿದೆ.<br>➢ ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಒ: 48 ಸಿಎಲ್‌ಎಂ:20022(ಇ) ಬೆಂಗಳೂರು. ದಿನಾಂಕ. 15-07-2023 ರನ್ವಯ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಲ್ಲಿ ಹಾಗೂ ಸೌಹಾರ್ದ ಸಹಕಾರಿ ಸಂಘಗಳಲ್ಲಿ ಹಣದುರುಪಯೋಗ ಪ್ರಕರಣಗಳು ಬೆಳಕಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಸಹಕಾರ ಸಂಘಗಳ ನಿಯಮಗಳು 1960 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004 ಗಳಿಗೆ ತಿದ್ದುಪಡಿ ತರುವ ಸಂಬಂಧ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸಹಕಾರ ಕ್ಷೇತ್ರದಲ್ಲಿ ಅನುಭವವುಳ್ಳ ಮಾನ್ಯ ಶಾಸಕರು ಹಾಗೂ ಹಿರಿಯ ಸಹಕಾರಿಗಳು ಹಾಗೂ ನಿವೃತ್ತ ಅಧಿಕಾರಿಗಳನ್ನು ಒಳಗೊಂಡಂತೆ ಮಾನ್ಯ |

| | | |
|---|---|---|
| | | ಶಾಸಕರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ರವರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ವರದಿಗಳನ್ನು ಸಲ್ಲಿಸಿರುತ್ತದೆ.<br><br>➢ ಸದರಿ ಸಮಿತಿಯ ಮಧ್ಯಂತರ ವರದಿಯನ್ನಾದರಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಾಯ್ದೆಗಳಿಗೆ ಕೆಲವೊಂದು ತಿದ್ದುಪಡಿ ತರಲು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿದೇಯಕ 2024 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ 2024 ಗಳನ್ನು ವಿಧಾನ ಮಂಡಲದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ.<br>➢ ಅಧ್ಯಯನ ಸಮಿತಿಯು ಸಲ್ಲಿಸಿದ ಪೂರ್ಣ ವರದಿಯನ್ನು ಆಧರಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಾಯ್ದೆಗಳ ಅಗತ್ಯ ತಿದ್ದುಪಡಿಗಳನ್ನು ತರಲು ಕ್ರಮವಹಿಸಲಾಗುತ್ತಿದೆ. |
| **ಉ.** | **ಸರ್ಕಾರದ ಅಧೀನದಲ್ಲಿ ಇರುವ ಸಹಕಾರಿ ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಿರುವಾಗ ಸಾರ್ವಜನಿಕರ ದುಡ್ಡನ್ನು ದುರುಪಯೋಗ ನಡೆಸುತ್ತಿರುವ ಖಾಸಗಿ ಸೌಹಾರ್ದದ ಸೊಸೈಟಿಗಳ ಅವಶ್ಯಕತೆ ಇದೆಯೇ? ವಿವರಿಸುವುದು.** | ಸರ್ಕಾರದ ಹಸ್ತಕ್ಷೇಪ ತಡೆಯಬಲ್ಲ, ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ, ಸದಸ್ಯರ ಸಹಭಾಗಿತ್ವ ಹೆಚ್ಚಿಸುವ, ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಯೋಜನಾ ಆಯೋಗ ರೂಪಿಸಿದ ಮಾದರಿ ಸಹಕಾರಿ ಕಾಯ್ದೆಗನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997" ಜನವರಿ 2001 ರಿಂದ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರಿಂದ ಜಾರಿಯಲ್ಲಿರುತ್ತದೆ.<br><br>**ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಡಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಅವ್ಯವಹಾರದ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಇದನ್ನು ತಡೆಗಟ್ಟಲು ಸರ್ಕಾರವು ಹಲವು ಕ್ರಮಗಳನ್ನು ವಹಿಸಿದೆ:-**<br><br>➢ ಕರ್ನಾಟಕ ಸೌಹಾರ್ದ (ತಿದ್ದುಪಡಿ) ವಿಧೇಯಕ 2024 ರಲ್ಲಿ ಪ್ರಕರಣ 33ಕ್ಕೆ ತಿದ್ದುಪಡಿ ತಂದು ಪ್ರತಿಯೊಂದು ಸೌಹಾರ್ದ ಸಹಕಾರಿಯು ಸಹಕಾರ |

| | | |
|---|---|---|
| | | ಲೆಕ್ಕಪರಿಶೋಧನಾ ಇಲಾಖೆಯ ಲೆಕ್ಕಪರಿಶೋಧಕರಿಂದ ಮೂರು ವರ್ಷಗಳಲ್ಲಿ ಒಂದು ಬಾರಿ ತನ್ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಿಸುವುದನ್ನು ಕಡ್ಡಾಯಗೊಳಿಸಲು ಪ್ರಸ್ತಾಪಿಸಲಾಗಿದೆ.<br>➢ ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಒ: 48 ಸಿಎಲ್ಎಂ:20022(ಇ) ಬೆಂಗಳೂರು. ದಿನಾಂಕ: 15-07-2023 ರನ್ವಯ ಸೌಹಾರ್ದ ಸಹಕಾರಿ ಸಂಘಗಳಲ್ಲಿ ಹಣದುರುಪಯೋಗ ಪ್ರಕರಣಗಳು ಬೆಳಕಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004 ಗಳಿಗೆ ತಿದ್ದುಪಡಿ ತರುವ ಸಂಬಂಧ ರಚಿಸಿದ ಅಧ್ಯಯನ ಸಮಿತಿಯು, ತನ್ನ ವರದಿಯನ್ನು ನೀಡುತ್ತಾ ದೇಶದ ಇತರೆ ರಾಜ್ಯಗಳಲ್ಲಿ ಸೌಹಾರ್ದ ಸಹಕಾರಿಗಳ ನಿಯಂತ್ರಣದ ಕುರಿತು, ಕಾಯ್ದೆಯನ್ನು ರಿಪೀಲ್ ಮಾಡಿದ ಕುರಿತು, ಕಾಯ್ದೆಯನ್ನು ನಿರಸನಗೊಳಿಸಿರುವ ಕುರಿತು ಅಧ್ಯಯನ ಮಾಡಿ ಸಹಕಾರಿಗಳ ಬಂಡವಾಳದ ಸದ್ಬಳಕೆ, ಠೇವಣಿದಾರರ ಭದ್ರತೆ ಅವರ ಹಿತರಕ್ಷಣೆಯನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತು ಸೌಹಾರ್ದ ಸಹಕಾರಿಗಳ ವ್ಯವಹಾರಗಳು ಪಾರದರ್ಶಕವಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಸೂಕ್ತ ತಿದ್ದುಪಡಿಗಳನ್ನು ಕಾಯ್ದೆಯಲ್ಲಿ ತರಲು ಶಿಫಾರಸ್ಸು ಮಾಡಿರುತ್ತದೆ.<br>➢ ಸರ್ಕಾರದ ಆದೇಶ ಸಂಖ್ಯೆ: ಸಿಒ 38 ಸಿಎಲ್ಎಂ 2024, ಬೆಂಗಳೂರು ದಿ: 16.03.2024 ರ ಮೂಲಕ ಸೌಹಾರ್ದ ಸಹಕಾರಿ ಸದಸ್ಯ ಠೇವಣಿದಾರರ, ಸಾಲಗಾರರ ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಮತ್ತು ಸೌಹಾರ್ದ ಸಹಕಾರಿಗಳ ಗುಣಮಟ್ಟದ ಅಭಿವೃದ್ಧಿಗಾಗಿ ನಿರ್ದೇಶನಗಳನ್ನು ನೀಡಿ ಆದೇಶಿಸಲಾಗಿದೆ. ಸದರಿ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ರಿಟ್ ಅರ್ಜಿ ಸಂಖ್ಯೆ: 9832/2024 ನ್ನು ದಾಖಲಿಸಿದ್ದು, ಪ್ರಸ್ತುತ ಸದರಿ ಆದೇಶಕ್ಕೆ ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. |

ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್** (ನಾಮ ನಿರ್ದೇಶನ ಹೊಂದಿದವರು) **ಇವರ ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:** 872(899)**ರ ಉಪ ಪ್ರಶ್ನೆ 'ಆ' ಗೆ ಸಂಬಂಧಿಸಿದಂತೆ ಅನುಬಂಧ 'ಅ'**

| ಕ್ರ. ಸಂ. | ಜಿಲ್ಲಾವಾರು/ ಸೌಹಾರ್ದ ಸಹಕಾರಿ ಸಂಘದ ಹೆಸರು | ದುರುಪಯೋಗವಾದ ಮೊತ್ತ | ಕೈಗೊಂಡ ಕ್ರಮಗಳು |
|---|---|---|---|
| 1 | 2 | 3 | 4 |
| | | **ಬೆಂಗಳೂರು** | |
| 1 | ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿಯಮಿತ, ನಂ.861, ಶ್ರೀ ಕಣ್ವ ಸಾಯಿ ಸಂಕೀರ್ಣ, ಮೋದಿ ಆಸ್ಪತ್ರೆ ರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು-560086 | ರೂ. 494/- ಕೋಟಿ (ಸಂಯುಕ್ತ ಸಹಕಾರಿಯ ಪರಿವೀಕ್ಷಣಾ ವರದಿಯ ಪ್ರಕಾರ) | 1. ಠೇವಣಿದಾರರ ದೂರಿನ ಹಿನ್ನಲೆಯಲ್ಲಿ ಬಸವೇಶ್ವರ ನಗರ ಪೋಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು. ಸದರಿ ಪ್ರಕರಣದಲ್ಲಿ ಪೋಲೀಸರಿಂದ ಜಪ್ತಿಯಾಗಿರುತ್ತದೆ ಇದೇ ರೀತಿ ವರ್ತೂರು, ಬಾಣಸವಾಡಿ ಸೇರಿದಂತೆ ಒಟ್ಟು 21 ಪೋಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿರುತ್ತವೆ. ರಾಜ್ಯ ಸರ್ಕಾರವು ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿದ್ದು, ಪ್ರಸ್ತುತ ಎಲ್ಲಾ ಪ್ರಕರಣಗಳನ್ನು ಸಿಐಡಿ ವಿಚಾರಣೆ ನಡೆಸುತ್ತಿದೆ. ವಿಚಾರಣಾಧಿಕಾರಿಗಳು ಚಾರ್ಜ್ ಶೀಟ್ ಸಲ್ಲಿಸಿರುತ್ತಾರೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 37ಎ ಅಡಿಯಲ್ಲಿ ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ಇಲ್ಲಿ 16 ಆರೋಪಿತರ ವಿರುದ್ಧ ಅವ್ಯವಹಾರ ಮೊತ್ತ ರೂ. 494 ಕೋಟಿ ರ ವಸೂಲಾತಿಗಾಗಿ ಅಧಿಭಾರ ಪ್ರಕರಣ ದಾಖಲಿಸಲಾಗಿದೆ. 02 ಆರೋಪಿತರ 10 ಆಸ್ತಿಯ ಮೇಲೆ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ. |
| 2 | ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ನಿ, #28, ಶಂಕರ ಮಠ ರಸ್ತೆ, ಶಂಕರಪುರಂ, ಬೆಂಗಳೂರು-560004 | ರೂ. 253,43,82,046/- ((ಸಂಯುಕ್ತ ಸಹಕಾರಿಯ ಪರಿವೀಕ್ಷಣಾ ವರದಿಯ ಪ್ರಕಾರ) | 1. ಸಂಯುಕ್ತ ಸಹಕಾರಿಯಿಂದ ಸದರಿ ಸಹಕಾರಿಯ ಆಡಳಿತ ಮಂಡಳಿಯ 22 ವ್ಯಕ್ತಿಗಳ ವಿರುದ್ಧ ದಿನಾಂಕ: 07.07.2020ರಂದು ಶಂಕರಪುರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. (ಪ್ರಕರಣ ಸಂಖ್ಯೆ: 0011/2020) ತದನಂತರ ಪ್ರಕರಣವು ಸಿಐಡಿಗೆ ವರ್ಗಾವಣೆಗೊಂಡಿರುತ್ತದೆ. ರಾಜ್ಯ ಸರ್ಕಾರವು ದಿನಾಂಕ:02.12.2023ರಂದು ಸದರಿ ಸಹಕಾರಿಯ ಪ್ರಕರಣಗಳನ್ನು ಸಿಬಿಐಗೆ ವಹಿಸಿರುತ್ತದೆ. ಸಿಬಿಐರವರು ತನಿಖೆ ಜರುಗಿಸಲು ಬೇಕಾದ ದಾಖಲಾತಿಗಳನ್ನು ಮಾನ್ಯ ಸಹಕಾರಿಗಳ ನಿಬಂಧಕರಿಗೆ ನೀಡಲಾಗಿರುತ್ತದೆ. 2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಆಡಳಿತಾಧಿಕಾರಿ ನೇಮಕವಾಗಿರುತ್ತಾರೆ. |
| 3 | ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ನಂ.1, ಮೊದಲನೆಯ ಮಹಡಿ, ಶ್ರೀ ರಾಮಾಂಜನೇಯ ರಸ್ತೆ, ಹನುಮಂತ ನಗರ, ಬೆಂಗಳೂರು-560019 | ರೂ.348,09,33,165/- (ಲೆಕ್ಕಪರಿಶೋಧನಾ ವರದಿಯ ಪ್ರಕಾರ) | 01. ಠೇವಣಿದಾರರಿಂದ ಹನುಮಂತನಗರ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ (ಎಫ್ಐಆರ್ ಸಂಖ್ಯೆ 108/2021, ದಿನಾಂಕ 24.06.2021) ದಾಖಲಾಗಿದು. ಸಂಯುಕ್ತ ಸಹಕಾರಿಯು ದಿನಾಂಕ: 14.03.2022ರಂದು ಸದರಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಮುಖ್ಯಕಾರ್ಯನಿರ್ವಾಹರು ಮತ್ತು ಸಾಲಗಾರರನ್ನು ಸೇರಿ ಒಟ್ಟು 56 ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ(ಎಫ್ಐಆರ್ ಸಂಖ್ಯೆ-0061/2022) ದಾಖಲಿಸಲಾಗಿರುತ್ತದೆ. ಸದರಿ ಸಹಕಾರಿಗಳಲ್ಲಿ ಬಹು ಕೋಟಿ ಅವ್ಯವಹಾರವಾಗಿರುವ ಹಿನ್ನಲೆಯಲ್ಲಿ ಸದರಿ ಸಹಕಾರಿಗಳ ಪ್ರಕರಣವನ್ನು ರಾಜ್ಯ ಸರ್ಕಾರವ ದಿನಾಂಕ:02.12.2023ರಂದು ಸಿಬಿಐಗೆ ವರ್ಗಾಹಿಸಿರುತ್ತದೆ. 2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ. |
| 4 | ಬೆಳ್ಳಿಬೆಳಕು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ, ನಂ.626, ಬೆಳ್ಳಿಬೆಳಕು, 1ನೇ ಮುಖ್ಯರಸ್ತೆ, ಕೆಂಪೇಗೌಡ ನಗರ, ಟಿ. ದಾಸರಹಳ್ಳಿ, ಬೆಂಗಳೂರು-560067 | ರೂ. 8,08,74,703/- (ಸಂಯುಕ್ತ ಸಹಕಾರಿಯ ಪರಿವೀಕ್ಷಣಾ ವರದಿಯ ಪ್ರಕಾರ) | 1. ಸಂಯುಕ್ತ ಸಹಕಾರಿಯಿಂದ ಸದರಿ ಸಹಕಾರಿಯ ಆಡಳಿತ ಮಂಡಳಿಯ 22 ವ್ಯಕ್ತಿಗಳ ವಿರುದ್ಧ ಬಾಗಲಕುಂಟೆ ಪೋಲೀಸ್ ಠಾಣೆಯಲ್ಲಿ ಪ್ರಕರಣ (ಎಫ್.ಐ.ಆರ್ ಸಂಖ್ಯೆ:0302/2020, ದಿನಾಂಕ:06.11.2020) ದಾಖಲಿಸಿದ್ದು, ಪ್ರಕರಣವು ಸಿ.ಐ.ಡಿಗೆ ವರ್ಗಾವಣೆಗೊಂಡಿರುತ್ತದೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ. |

| ಕ್ರ. ಸಂ. | ಜಿಲ್ಲಾವಾರು/ ಸೌಹಾರ್ದ ಸಹಕಾರಿ ಸಂಘದ ಹೆಸರು | ದುರುಪಯೋಗವಾದ ಮೊತ್ತ | ಕೈಗೊಂಡ ಕ್ರಮಗಳು |
|---|---|---|---|
| 1 | 2 | 3 | 4 |
| 5 | ನಾಗರತ್ನ ಸೌಹಾರ್ದ ಕ್ರೆಡಿಟ್ ಕೋ-ಆಪರೇಟೀವ್ ಲಿ, ನಂ.1, ಮೊದಲನೆಯ ಮಹಡಿ, ಶ್ರೀ ಲಕ್ಷ್ಮೀ ಕಾಂಪ್ಲೆಕ್ಸ್, ವಿದ್ಯಾಪೀಠ ಸರ್ಕಲ್, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು-560050 | ರೂ11,40,27,069- (ಲೆಕ್ಕಪರಿಶೋಧನಾ ವರದಿಯ ಪ್ರಕಾರ) | 1. ಠೇವಣೀದಾರರಿಂದ ಸದರಿ ಸಹಕಾರಿಯ ಆಡಳಿತ ಮಂಡಳಿಯ ವಿರುದ್ಧ ಹನುಮಂತ ನಗರ ಪೋಲೀಸ್ ಠಾಣೆಯಲ್ಲಿ 3 ಎಫ್.ಐ.ಆರ್ ದಾಖಲಾಗಿರುತ್ತದೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 17 ಆರೋಪಿತರ ವಿರುದ್ಧ ಅವ್ಯವಹಾರ ಮೊತ್ತ ರೂ./-10.86.91.952/- ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿ ಆಸ್ತಿಯನ್ನು 05 ಆರೋಪಿಯ 04 ಆಸ್ತಿಯ ಮೇಲೆ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ. |
| 6 | ಶ್ರೀ ಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ನಿ, ನಂ.1995, 1ನೇ ಅಡ್ಡರಸ್ತೆ, ಲಾಲ್‌ಬಹುದ್ದೂರ್ ಶಾಸ್ತ್ರಿ ನಗರ, ವಿಮಾನಪುರ ಅಂಚೆ, ಬೆಂಗಳೂರು-560017 | ರೂ. 21,54,69,443/- (ಲೆಕ್ಕಪರಿಶೋಧನಾ ವರದಿಯ ಪ್ರಕಾರ) | 1. ಸದರಿ ಸಹಕಾರಿಗೆ ಸಮಾಪನಾಧಿಕಾರಿಗಳು ನೇಮಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೂ ಪ್ರಕರಣವನ್ನು ಸಿ.ಐ.ಡಿ ಗೆ ವರ್ಗಾವಣೆಯಾಗಿರುತ್ತದೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3 |
| 7 | ಸಿರಿವೈಭವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟೀವ್ ಲಿ, ನಂ.18/19, 2ನೇ ಮಹಡಿ, ಮುನಿರಾಮಸ್ವಾಮಿ ಬಿಲ್ಡಿಂಗ್, ಮಸಾಲಾ ಹೋಟೆಲ್ ಎದುರು, ಉತ್ತರಹಳ್ಳಿ ಮುಖ್ಯ ರಸ್ತೆ, ಚಿಕ್ಕಲಸಂದ್ರ, ಬೆಂಗಳೂರು-560061 | ರೂ. 74,35,09,076/- (ಲೆಕ್ಕಪರಿಶೋಧನಾ ವರದಿಯ ಪ್ರಕಾರ) | 1. ಸಂಯುಕ್ತ ಸಹಕಾರಿಯಿಂದ ಸದರಿ ಸಹಕಾರಿಯ ವಿರುದ್ಧ ಸುಬ್ರಮಣ್ಯಪುರ ಪೋಲೀಸ್ ಠಾಣೆಯಲ್ಲಿ ಆಡಳಿತ ಮಂಡಳಿಯ 14 ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. (ಎಫ್.ಐ.ಆರ್ ಸಂಖ್ಯೆ:187/2022). ಸದರಿ ಪ್ರಕರಣವು ಸಿ.ಐ.ಡಿಗೆ ವರ್ಗಾವಣೆಗೊಂಡಿರುತ್ತದೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಸೌಹಾರ್ದ ಕಾಯ್ದೆಯಡಿ ಅಧಿಭಾರ ಪ್ರಕರಣ ದಾಖಲಿಸಲಾಗಿದೆ.<br>4. ಸಹಕಾರಿಗೆ ಸಮಾಪನಾಧಿಕಾರಿಯು ನೇಮಕವಾಗಿರುತ್ತಾರೆ. |
| 8 | ಶ್ರೀ ಶೈಲಗಿರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟೀವ್ ಲಿ, ಅಶೋಕ ಪ್ಲಾಜಾ, ನಂ.48, ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು-560004 | ರೂ.16/- ಕೋಟಿ (ಸಂಯುಕ್ತ ಸಹಕಾರಿಯ ಪರಿವೀಕ್ಷಣಾ ವರದಿಯ ಪ್ರಕಾರ) | ಸಂಯುಕ್ತ ಸಹಕಾರಿಯಿಂದ ಸದರಿ ಸಹಕಾರಿಯ ಆಡಳಿತ ಮಂಡಳಿಯ 10 ವ್ಯಕ್ತಿಗಳ ವಿರುದ್ಧ ಬಸವನಗುಡಿ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. (ಎಫ್.ಐ.ಆರ್ ಸಂಖ್ಯೆ:49/2022), ಸದರಿ ಪ್ರಕರಣವು ಸಿ.ಐ.ಡಿಗೆ ವರ್ಗಾವಣೆಗೊಂಡಿರುತ್ತದೆ. ಸದರಿ ಸಹಕಾರಿಗೆ ರಾಜ್ಯ ಸರ್ಕಾರವು ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳನ್ನಾಗಿ ಸಹಾಯಕ ಆಯುಕ್ತರು-1 ಮತ್ತು ಸಕ್ಷಮ ಪ್ರಾಧಿಕಾರಿಗಳು, ವಿಶೇಷಾಧಿಕಾರಿಗಳು ಸಕ್ಷಮ ಪ್ರಾಧಿಕಾರಿಗಳ ಕಛೇರಿ, ವಿ.ವಿ ಟವರ್, ಬೆಂಗಳೂರು ಇವರು ನೇಮಕಗೊಂಡಿರುತ್ತಾರೆ. |
| 9 | ಅಮೋಘ ಕರುನಾಡು ಪೂರ್ಣ ಸೇವಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟೀವ್ ಲಿ, ನಂ.78, ಶ್ರೀ ಹರಿ ಟವರ್, ಹೆಚ್‌ಎಮ್‌ಟಿ ಲೇಔಟ್, 9ನೇ ರಸ್ತೆ, ಆರ್‌ಟಿ ನಗರ, ಬೆಂಗಳೂರು-560032 | ರೂ, 8,03,49,862/- (2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಂತೆ) | ಸದರಿ ಸಹಕಾರಿಯ ಕುರಿತು ಸಂಯುಕ್ತ ಸಹಕಾರಿಯ ಕ್ರಮವು ಜಾರಿಯಲ್ಲಿರುತ್ತದೆ. |
| 10 | ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ನಿ, ನಂ.68, ಶುಶೃತಿ ನಗರ, ಅಂದ್ರಹಳ್ಳಿ ಮುಖ್ಯರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು-560091 | ರೂ. 102,01,55,534.15 | ಠೇವಣಿದಾರರಿಂದ ಸಹಕಾರಿಯ ಆಡಳಿತ ಮಂಡಳಿ ವಿರುದ್ಧ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ. ಪ್ರಕರಣವು ಸಿಸಿಬಿಗೆ ವರ್ಗಾವಣೆಗೊಂಡಿದ್ದು, ತನಿಖೆ ಜಾರಿಲ್ಲಿರುತ್ತದೆ. ರೂ. 54.16 ಕೋಟಿ (ಡಿಐಸಿಜಿಸಿ ಇಂದ ಠೇವಣಿದಾರರಿಗೆ ನೀಡಲಾಗಿರುತ್ತದೆ.)ಸದರಿ ಸಹಕಾರಿಗೆ ಸಮಾಪಕರು ನೇಮಕವಾದ ನಂತರ ಅಂದಾಜು ರೂ.3.20.00.000 ವಸೂಲಾಗಿರುತ್ತದೆ. |

| ಕ್ರ. ಸಂ. | ಜಿಲ್ಲಾವಾರು/ ಸೌಹಾರ್ದ ಸಹಕಾರಿ ಸಂಘದ ಹೆಸರು | ದುರುಪಯೋಗವಾದ ಮೊತ್ತ | ಕೈಗೊಂಡ ಕ್ರಮಗಳು |
|---|---|---|---|
| 1 | 2 | 3 | 4 |
| 11 | ಶೃತಿ ಸೌಹಾರ್ದ ಪತ್ತಿನ ಸಹಕಾರಿ ನಿ, ನಂ.29, ಲಗ್ಗೆರೆ ಮುಖ್ಯ ರಸ್ತೆ, ಲಗ್ಗೆರೆ, ಬೆಂಗಳೂರು-560058 | ರೂ. 24,32,34,385/- (2021-22ರಡಿ ಲೆಕ್ಕಪರಿಶೋಧನಾ ವರದಿಯಂತೆ) | ಠೇವಣಿದಾರರಿಂದ ಸಹಕಾರಿಯ ಆಡಳಿತ ಮಂಡಳಿ ವಿರುದ್ಧ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ. ಪ್ರಕರಣವು ಸಿಸಿಬಿಗೆ ವರ್ಗಾವಣೆಗೊಂಡಿದ್ದು, ತನಿಖೆ ಜಾರಿಲ್ಲಿರುತ್ತದೆ. ರಾಜ್ಯ ಸರ್ಕಾರವು ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳನ್ನಾಗಿ ಸಹಾಯಕ ಆಯುಕ್ತರು, ಬೆಂಗಳೂರು ದಕ್ಷಿಣ ಉಪ-ವಿಭಾಗ, ಬೆಂಗಳೂರು ಇವರನ್ನು ನೇಮಕ ಮಾಡಿದ್ದು, ಪ್ರಸ್ತುತ ಸದರಿ ಸಹಕಾರಿಯಲ್ಲಿ ಜರುಗಿರುವ ಅವ್ಯವಹಾರಕ್ಕೆ ಸಂಬಂಧಿಸಿದ ವ್ಯಕ್ತಿಗಳ 37 ಆಸ್ತಿಗಳನ್ನು ಜಪ್ತಿ ಮಾಡಿರುತ್ತದೆ. |
| 12 | ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ, ನಂ.136, 6ನೇ ಮೈನ್, ಬ್ಯಾಟರಾಯನಪುರ, ಬೆಂಗಳೂರು-50097 | ರೂ. 18/- ಕೋಟಿ (ಠೇವಣಿದಾರರ/ದೂರುದಾರರ ಪ್ರಕಾರ) | ಸದರಿ ಸಹಕಾರಿಗೆ ಸಮಾಪನಾಧಿಕಾರಿಗಳಾಗಿ ಮಾನ್ಯ ಸಹಕಾರಿಗಳ ನಿಬಂಧಕರು, 2ನೇ ವಲಯ ಬೆಂಗಳೂರು ರವರು ಕಾರ್ಯನಿರ್ವಹಿಸುತ್ತಿದ್ದಾರೆ.<br>ಸಮಾಪನಾಧಿಕಾರಿಯಿಂದ ಸಹಕಾರಿಯ ನಿರ್ದೇಶಕರ ವಿರುದ್ಧ ದಾವಾ ಪಂಚಾಯ್ತಿ ನ್ಯಾಯಲಯದಲ್ಲಿ ಅಧಿಬಾರ ಪ್ರಕರಣಗಳು ದಾಖಲಿಸಿರುತ್ತಾರೆ. 5 ಪ್ರಕರಣಗಳಲ್ಲಿ ಐತಿರ್ಪು ಪಡೆದು ಅಮಲ್ಜಾರಿ ಪ್ರಕರಣ ದಾಖಲಿಸಿದ್ದು, ಪ್ರಕರಣ ಚಾಲ್ತಿಯಲ್ಲಿರುತ್ತವೆ. |
| 13 | ಕುರುಹಿನಶೆಟ್ಟಿ ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ., ಬೆಂಗಳೂರು. | ರೂ.56,47,07,963/- (ಪರಿವೀಕ್ಷಣಾ ವರದಿಯಲ್ಲಿ ಕಂಡುಬಂದ ಸುಸ್ತಿಯಾದ ಮೊತ್ತ. ಸದರಿ ಸಹಕಾರಿಯಲ್ಲಿ ಯಾವುದೇ ಅವ್ಯವಹಾರ ಮೇಲ್ನೋಟಕ್ಕೆ ಕಂಡುಬಂದಿರುವುದಿಲ್ಲ.) | 01. ಸಹಕಾರಿಯ ವಿರುದ್ಧ ಬೆಂಗಳೂರಿನ ಕಂಪೇಗೌಡ ಪೋಲೀಸ್ ಠಾಣೆಯಲ್ಲಿ ಠೇವಣಿದಾರರ ದೂರಿನ ಆಧಾರದಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸಹಕಾರಿಯ ಅಧ್ಯಕ್ಷರು, ಕೆಲ ನಿರ್ದೇಶಕರುಗಳನ್ನು ಮತ್ತು ಮಾಜಿ ಮುಖ್ಯಕಾರ್ಯನಿವಾಹಕರನ್ನು ಬಂಧಿಸಲಾಗಿದ್ದು, ಪ್ರಸ್ತುತ ಸದರಿಯವರು ಜಾಮೀನಿನ ಮೇಲೆ ಹೊರಬಂದಿರುತ್ತಾರೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ. ವಿಶೇಷಾಧಿಕಾರಿಗಳ ಅವಧಿಯಲ್ಲಿ 40 ಕೋಟಿಗಳಷ್ಟು ಹಣವನ್ನು ಸುಸ್ತಿ ಸಾಲಗಾರರಿಂದ ವಸೂಲಿ ಮಾಡಲಾಗಿದೆ. |
| 14 | ನಿಷ್ಕ ಸೌಹಾರ್ದ ಸಹಕಾ ನಿ., ಬೆಂಗಳೂರು | ರೂ.18,85,44,700/- (2012-2013ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ ಠೇವಣಿದಾರರಿಗೆ ಠೇವಣಿ ಮರುಪಾವತಿಸಬೇಕಾದ ಮೊತ್ತ) | 1.ಸಹಕಾರಿಯ ಕುರಿತು 20ಕ್ಕೂ ಹೆಚ್ಚು ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಒಂದು ಪ್ರಕರಣವು ಸಿಐಡಿ ಗೆ ವರ್ಗಾವಣೆ ಗೊಂಡಿರುತ್ತದೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಸಹಕಾರಿಗೆ ಸಮಾಪನಾಧಿಕಾರಿಯು ನೇಮಕವಾಗಿರುತ್ತಾರೆ. |
| | | **ಚಿತ್ರದುರ್ಗ** | |
| 15 | ಗ್ರೇಟ್ ಪೋರ್ಟ್ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ | ರೂ.8,26,85,780 (ಸಂಯುಕ್ತ ಸಹಕಾರಿಯ ಪರಿವೀಕ್ಷಣಾ ವರದಿಯ ಪ್ರಕಾರ) | 1. ಠೇವಣಿದಾರರಿಂದ ಠೇವಣಿ ಮರುಪಾವತಿಸುತ್ತಿಲ್ಲವೆಂದು ಸದರಿ ಸಹಕಾರಿಯ ವಿರುದ್ಧ ದಿನಾಂಕ:27.06.2019ರಂದು ಚಿತ್ರದುರ್ಗ ಉಪವಿಭಾಗ ಪೋಲೀಸ್ ಠಾಣೆಯಲ್ಲಿ ಎಫ್ಐಆರ್(ಎಫ್ಐಆರ್ ಸಂಖ್ಯೆ:0127/2019) ದಾಖಲಾಗಿದೆ. ಪ್ರಸ್ತುತ ಪ್ರಕರಣವು ಸಿಐಡಿ ವರ್ಗಾವಣೆಯಾಗಿರುತ್ತದೆ.<br>2.ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ. |
| | | **ದಾವಣಗೆರೆ** | |

| ಕ್ರ. ಸಂ. | ಜಿಲ್ಲಾವಾರು/ ಸೌಹಾರ್ದ ಸಹಕಾರಿ ಸಂಘದ ಹೆಸರು | ದುರುಪಯೋಗವಾದ ಮೊತ್ತ | ಕೈಗೊಂಡ ಕ್ರಮಗಳು |
|---|---|---|---|
| 1 | 2 | 3 | 4 |
| 16 | ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ | ರೂ.8,26,85,780 (ಸಂಯುಕ್ತ ಸಹಕಾರಿಯ ಪರಿವೀಕ್ಷಣಾ ವರದಿಯ ಪ್ರಕಾರ) | 1. ಸದರಿ ಸಹಕಾರಿಯ ವಿರುದ್ಧ ಪ್ರಕರಣ ದಾಖಲಿಸಲು ಕೆಟಿಜೆ ನಗರ ಠಾಣಾಧಿಕಾರಿಗಳಿಗೆ ದೂರು ನೀಡಲಾಗಿರುತ್ತದೆ ಮತ್ತು ಪ್ರಕರಣ ದಾಖಲಿಸಲು ಠಾಣಾಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರನ್ನು ಪತ್ರದ ಮುಖಾಂತರ ಕೋರಲಾಗಿರುತ್ತದೆ.<br>2. ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 19 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ.8,26,85,750/-ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿರುತ್ತದೆ. ಪ್ರಕರಣದ ವಿಚಾರಣೆ ಪ್ರಗತಿಯಲಿರುತದೆ. |
| | | **ಕೋಲಾರ** | |
| 17 | ಸೆವೆನ್ ಹಿಲ್ಸ್ ವಿವಿದೋದ್ದೇಶ ಸೌಹಾರ್ದ ಕೋ-ಆಪರೇಟಿವ್ ಲಿ, ನಂ.385/1, :ಜನನಿ ಭವನ" ಮಾರತಿ ಬಡಾವಣೆ, ಮಾಲೂರು ಟೌನ್ ಕ್ಲಬ್ ಎದುರು, ಮಾಲೂರು, ಕೋಲಾರ-563130 | ರೂ. 10,92,11,722/- (ಲೆಕ್ಕಪರಿಶೋಧನಾ ವರದಿಯ ಪ್ರಕಾರ) | 1. ಠೇವಣಿದಾರರಿಂದ ಸಹಕಾರಿಯ ಆಡಳಿತ ಮಂಡಳಿಯ ವಿರುದ್ಧ ವಿವಿದ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ.<br>ಮುಂದುವರೆದು ಸದರಿ ಪ್ರಕರಣವುಸಿಐಡಿ ಗೆ ವರ್ಗಾವಣೆಗೊಂಡು ಪ್ರಕರಣ ಚಾಲ್ತಿಯಲ್ಲಿರುತ್ತದೆ.<br>2. ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಸಹಕಾರಿಗೆ ಸಮಾಪನಾಧಿಕಾರಿಯು ನೇಮಕವಾಗಿರುತ್ತಾರೆ. |
| | | **ತುಮಕೂರು** | |
| 18 | ಶ್ರೀ ವಲ್ಮೀಕ ಸೌಹಾರ್ದ ಸಹಕಾರಿ ನಿ., ತುಮಕೂರು | ರೂ. 3,82,29,423 (ಲೆಕ್ಕಪರಿಶೋಧನಾ ವರದಿಯಂತೆ) | ಲೆಕ್ಕ ಪರಿಶೋಧನಾ ವರದಿ ಅನುಸಾರ ತಪ್ಪಿತಸ್ಥರ ಮೇಲೆ ಕರ್ನಾಕಟ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 37ಎ ಅಡಿಯಲ್ಲಿ ಅಧಿಬಾರ ಪ್ರಕರಣ ದಾಖಲಿಸುವ ಪ್ರಕ್ರೀಯೆ ಜಾರಿಯಲ್ಲಿದೆ. |
| | | **ಬೆಳಗಾವಿ** | |
| 19 | ಶ್ರೀ ಭೀಮಾಂಭಿಕ ಮಹಿಳಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ | 41,62,51,818/- (ಸಹಕಾರಿಯ ನಷ್ಟದ ಮೊತ್ತ) | 1. ಸಹಕಾಎರಿಯ ಆಡಳಿತ ಮಂಡಳಿಯ 12 ವ್ಯಕ್ತಿಗಳ ವಿರುದ್ಧ ಖಡೇಬಜಾರ ಪೊಲೀಸ್ ಠಾಣೆ, ಬೆಳಗಾವಿಯಲ್ಲಿ ಗುನ್ನಾ ನಂ: 47/2018 ಕಲಂ 406, 420, 341, 506 ಐಪಿಸಿ ನೇದ್ದರಲ್ಲಿ ಪಿರ್ಯಾದನ್ನು ದಾಖಲಿಸಲಾಗಿರುತ್ತದೆ. ಸದರಿ ಪ್ರಕರಣವು ಸಿಐಡಿಗೆ ವರ್ಗಾವಣೆ ಆಗಿರುತ್ತದೆ.<br>2. ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ. 3. ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 14 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ. 41,62,51,818/-ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿರುತ್ತದೆ. ಪ್ರಕರಣದ ವಿಚಾರಣೆ ಪ್ರಗತಿಯಲ್ಲಿರುತ್ತದೆ. |
| 20 | ಶ್ರೀ ಆಶ್ರಯ ಸೌಹಾರ್ದ ಸಹಕಾರಿ ಪತ್ತಿನ ಸಹಕಾರಿ ನಿ., ಬೆಳಗಾವಿ | ರೂ.45,08,23,442/- (ಸಹಕಾರಿಯ ನಷ್ಟದ ಮೊತ್ತ) | ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 14 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ.45,08,23,422/- ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿ ಆಸ್ತಿಯನ್ನು 01 ಆರೋಪಿಯ 01 ಆಸ್ತಿಯ ಮೇಲೆ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ. |
| 21 | ಶ್ರೀ ಗಜರಾಜ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ | ರೂ14,45,35,420/- (ಸಹಕಾರಿಯ ನಷ್ಟದ ಮೊತ್ತ) | ಠೇವಣಿದಾರರು ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 12 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ.14,45,35,420/-ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿರುತ್ತದೆ. ಪ್ರಕರಣದ ವಿಚಾರಣೆ ಪ್ರಗತಿಯಲ್ಲಿರುತ್ತದೆ |

| ಕ್ರ. ಸಂ. | ಜಿಲ್ಲಾವಾರು/ ಸೌಹಾರ್ದ ಸಹಕಾರಿ ಸಂಘದ ಹೆಸರು | ದುರುಪಯೋಗವಾದ ಮೊತ್ತ | ಕೈಗೊಂಡ ಕ್ರಮಗಳು |
|---|---|---|---|
| 1 | 2 | 3 | 4 |
| 22 | ಶ್ರೀ ಬಸವೇಶ್ವರ ವಿವಿದೋದ್ದೇಶಗಳ ಸೌಹಾರ್ದ ಸಹಕಾ ನಿ., ಚಿಕ್ಕೋಡಿ | 81,61,94,632/- (ಸಹಕಾರಿಯ ನಷ್ಟದ ಮೊತ್ತ) | 1. ಸಂಯುಕ್ತ ಸಹಕಾರಿಯು ಠೇವಣಿದಾರರ ಠೇವಣಿ ಮೊತ್ತವನ್ನು ಮರುಪಾವತಿಸದ ಹಿನ್ನೆಲೆಯಲ್ಲಿ ಸಹಕಾರಿಯ ವಿರುದ್ಧ ಅಪರಾಧಿಕ ದಂಡ ಸಂಹಿತೆ ಕಲಂ ೨೦೦ರಡಿಯಲ್ಲಿ ಚಿಕ್ಕೋಡಿಯಲ್ಲಿ ಖಾಸಗಿ ಫಿರ್ಯಾದನ್ನು ಜೆ.ಎಮ್.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ.ಪ್ರಕರಣ ಸಂಖ್ಯೆ: 238/2019 ಆಗಿರುತ್ತದೆ.<br>2. ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಸಹಕಾರಿಗೆ ಸಮಾಪನಾಧಿಕಾರಿಯು ನೇಮಕವಾಗಿರುತ್ತಾರೆ. |
| 23 | ಶ್ರೀ ಷಡಕ್ಷರಿ ಶಿವಯೋಗಿ ಸಿದ್ಧರಾಮೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ. ದಾದಬಾನಹಟ್ಟಿ, ತಾ: ಹುಕ್ಕೇರಿ | 1,71,00,000/- | 1. ಸಂಯುಕ್ತ ಸಹಕಾರಿಯು ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿಗಳ ವಿರುದ್ಧ ಖಾಸಗಿ ಫಿರ್ಯಾದನ್ನು ದಿನಾಂಕ 26 ಫೆಬ್ರವರಿ 2021 ರಂದು, ಪ್ರಕರಣ ಸಂಖ್ಯೆ 28/2021 ರಂತೆ ಜೆ.ಎಮ್.ಎಫ್.ಸಿ ನ್ಯಾಯಾಲಯ ಸಂಕೇಶ್ವರದಲ್ಲಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ.<br>2. ಸಹಕಾರಿಗೆ ಸಮಾಪನಾಧಿಕಾರಿಯು ನೇಮಕವಾಗಿರುತ್ತಾರೆ. |
| 24 | ಓನ್ ನೆಸ್ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ | 1,23,34,978/- (ಠೇವಣಿದಾರರ ದೂರರ್ಜಿ ಮೊತ್ತ) | ಸಹಕಾರಿಯು ಠೇವಣಿದಾರರ ಠೇವಣಿ ಮೊತ್ತವನ್ನು ಮರುಪಾವತಿಸುತ್ತಿಲ್ಲದ ಹಿನ್ನೆಲೆಯಲ್ಲಿ ಸಂಕೇಶ್ವರ ಪೋಲಿಸ್ ಠಾಣೆಯಲ್ಲಿ ಲಿಖಿತದಲ್ಲಿ ಅಂಚೆ ಮೂಲಕ ದೂರನ್ನು ನೀಡಲಾಗಿರುತ್ತದೆ. ಆದರೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವುದಿಲ್ಲ. |
| 25 | ಕಿತ್ತೂರು ರಾಣಿ ಚೆನ್ನಮ್ಮ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ | 797,27,48,677/- (2022-23 ನೇ ಸಾಲಿನ ಲೆಕ್ಕಪರಿಶೋಧನಾ ವರದಿ) | ಪ್ರಸುತ್ತ ಸದರಿ ಪ್ರಕರಣದಲ್ಲಿ ಸಂಯುಕ್ತ ಸಹಕಾರಿಯಿಂದ ಸಹಕಾರಿಯ18 ನಿರ್ದೇಶಕರ ಮತ್ತು ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 37ಎ ಅಡಿಯಲ್ಲಿ ಸೌಹಾರ್ದ ದಾವಾ ಪಂಚಾಯ್ತಿ ನ್ಯಾಲಯದಲ್ಲಿ ಅಧಿಭಾರ ಪ್ರಕರಣವನ್ನು ದಾಖಲು ಮಾಡಲಾಗಿದೆ. ಸದರಿ ಪ್ರಕರಣದಲ್ಲಿ ಇಬ್ಬರ ಆಪಾದಿತರ ಒಟ್ಟು 54 ಆಸ್ತಿಯ ಮೇಲೆ ಆದೇಶ ಪೂರ್ವ ಜಪ್ತಿ ಪಡೆಯಲಾಗಿದೆ. ಸದರಿ ಆದೇಶದಂತೆ ಸ್ಥಿರಾಸ್ತಿಗಳ ಮೇಲೆ ಋಣಭಾರ ದಾಖಲಿಸಿದೆ. ಅಧಿಭಾರ ಅರ್ಜಿ ಪ್ರಕರಣ ನ್ಯಾಯಾಲಯದಲ್ಲಿ ಜಾರಿ ಇರುತ್ತದೆ. |
| 26 | ಎಸ್ ಎಮ್ ಎನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ | ರೂ.29,29,62,554/- | 1. ಗಾಂಧಿನಗರ, ವಿಜಯಪುರ ಪೋಲಿಸ್ ಠಾಣೆಯಲ್ಲಿ ಆಡಳಿತ ಮಂಡಳಿ ಸದಸ್ಯರ ಮತ್ತು ಮುಖ್ಯ ಕಾರ್ಯನಿರ್ವಾಹಕರು ಹಾಗೂ ಶಾಖಾ ವ್ಯವಸ್ಥಾಪಕರನ್ನು ಒಳಗೊಂಡಂತೆ ಒಟ್ಟು 47 ವ್ಯಕ್ತಿಗಳ ವಿರುದ್ಧ ಪ್ರಕರಣ (ಎಫ್.ಐ.ಆರ್ ಸಂಖ್ಯೆ 145/2020) ದಾಖಲಿಸಲಾಗಿದೆ. ಸದರಿ ಪ್ರಕರಣವು ಸಿಐಡಿಗೆ ವರ್ಗಾವಣೆ ಆಗಿರುತ್ತದೆ.<br>2. ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ.<br>3. ಸಹಕಾರಿಗೆ ಸಮಾಪನಾಧಿಕಾರಿಯು ನೇಮಕವಾಗಿರುತ್ತಾರೆ.<br>4. ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 48 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ.29,29,62,554/-ರ ವಸೂಲಾತಿಗಾಗಿ 04 ಆರೋಪಿತರ 08 ಆಸ್ತಿಯ ಮೇಲೆ ಕರ್ನಾಟಕ ಸೌಹಾರ್ದ ಸಹಕರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಭಾರ ಪ್ರಕರಣ ದಾಖಲಿಸಿ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ. |
| | ವಿಜಯನಗರ | | |

| ಕ್ರ. ಸಂ. | ಜಿಲ್ಲಾವಾರು/ ಸೌಹಾರ್ದ ಸಹಕಾರಿ ಸಂಘದ ಹೆಸರು | ದುರುಪಯೋಗವಾದ ಮೊತ್ತ | ಕೈಗೊಂಡ ಕ್ರಮಗಳು |
|---|---|---|---|
| 1 | 2 | 3 | 4 |
| 27 | ಅಹನಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,#483 ಅನ್ನಪೂರ್ಣ ನಿಲಯ, 100 ಹಾಸಿಗೆ ಆಸ್ಪತ್ರೆ ರಸ್ತೆ, ಹೋಂಡಾ ಶೋರೂಂ ಹತ್ತಿರ, ಹೊಸಪೇಟೆ. | ರೂ.42,72,44,027/- (2020-2021ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ) | 1. ದಿನಾಂಕ 03 ಏಪ್ರೀಲ್2021 ರಂದು ಹೊಸಪೇಟೆ ಪೋಲಿಸ್ ಠಾಣೆಯಲ್ಲಿ ಸದರಿ ಸಹಕಾರಿಯ ಹಾಲಿ ಮತ್ತು ಮಾಜಿ ಆಡಳಿತ ಮಂಡಲಿ ಸದಸ್ಯರ ಹಾಗೂ ಮುಖ್ಯ ಕಾರ್ಯನಿರ್ವಾಹಕರ ಮೇಲೆ (ಒಟ್ಟು ೨೩ ಜನ) ಕ್ರೀಮಿನಲ್ ಪ್ರಕರಣವನ್ನು ದಾಖಲೆ ಮಾಡಲಾಗಿರುತ್ತದೆ (ಪ್ರಥಮ ವರ್ತಮಾನ ಸಂಖ್ಯೆ:೦೦೨೬/೨೦೨೧) 2. ಸೌಹಾರ್ದ ಕಾಯ್ದೆಯಡಿ ಅಧಿಭಾರ ಪ್ರಕರಣ ದಾಖಲಿಸಲಾಗಿದೆ. 3. ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳು ನೇಮಕವಾಗಿರುತ್ತಾರೆ. 3. ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 25 ಆರೋಪಿತರ ವಿರುದ್ಧ ಅವ್ಯವಹಾರ ಮೊತ್ತ ರೂ.5,30,81,041/-ರ ವಸೂಲಾತಿಗಾಗಿ 10 ಆರೋಪಿತರ 19 ಆಸ್ತಿಯ ಮೇಲೆ ಕರ್ನಾಟಕ ಸೌಹಾರ್ದ ಸಹಕರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ. |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ (ನಾಮ ನಿರ್ದೇಶನ ಹೊಂದಿದವರು) ಇವರ ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 872(899)ರ ಉಪ ಪ್ರಶ್ನೆ 'ಇ' ಗೆ ಸಂಬಂಧಿಸಿದಂತೆ ಪ್ರಕರಣ 35 ಕ್ಕೆ (ರೂಗಳಲ್ಲಿ) ಅನುಬಂಧ-ಆ.

| ಕ್ರ.ಸಂ | ಜಿಲ್ಲಾವಾರು ಸೌಹಾರ್ದ ಸಹಕಾರಿ ಸಂಘದ ಹೆಸರು | ಕಲಂ 35 ರಡಿ ವಿಚಾರಣಾ ವರಧಿಯಂತೆ ಹಣ ದುರುಪಯೋಗದ ಮೊತ್ತ | ದಿ: 30.11.2024ಕ್ಕೆ ಇದ್ದಂತೆ ವಸೂಲಾತಿಯ ಮೊತ್ತ | ವಸೂಲಾತಿಗೆ ಬಾಕಿ ಇರುವ ಮೊತ್ತದ ವಿವರ | ಹಣ ದುರುಪಯೋಗದ ಮೊತ್ತದ ವಸೂಲಾತಿಗೆ | | ಆಡಳಿತ ಮಂಡಳಿ ಸದಸ್ಯರ ವಿರುದ್ಧ ತೆಗೆದುಕೊಂಡ ಕ್ರಮ | ಆರೋಪಿತರ ವಿರುದ್ಧ ತೆಗೆದುಕೊಂಡ ಕ್ರಿಮಿನಲ್ ಕ್ರಮದ ವಿವರ | ಷರಾ |
|---|---|---|---|---|---|---|---|---|---|
| | | | | | ಕಲಂ 44 ರಡಿ ಜಪ್ತಿ ಮಾಡಿದ ಸ್ಥಿರಾಸ್ತಿಗಳ ವಿವರ | ಕಲಂ 37ಎ ರಡಿ ಅಧಿಭಾರ ಪ್ರಕರಣದ ವಿವರ | | | |
| 1 | 2 | 3 | 4 | 5 | 6 | 7 | 8 | 9 | 11 |
| 1 | ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ., ಬೆಂಗಳೂರು | ರೂ.476,00,52,480/- | - | ರೂ.476,00,52,480/- | ಆರೋಪಿತರ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ ಒಟ್ಟು 10 ಆಸ್ತಿಗಳ ಮೇಲೆ ಆದೇಶ ಪೂರ್ವ ಜಪ್ತಿಯನ್ನು ಪಡೆಯಲಾಗಿದೆ. | 16 ಆರೋಪಿತರ ಮೇಲೆ ಅಧಿಬಾರ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ವಿಚಾರಣೆ ಜಾರಿಯಲ್ಲಿರುತ್ತದೆ. | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 25 (4)ರಡಿ ಎಲ್ಲ ನಿರ್ದೇಶಕರಗಳನ್ನು ಅನರ್ಹಗೊಳಿಸಲಾಗಿದೆ. | 1. ಸಹಕಾರಿಯ ಆಡಳಿತ ಮಂಡಲಿಯ ವಿರುದ್ಧ ಕರ್ನಾಟಕ ರಾಜ್ಯ ವಿವಿಧ ಪೋಲೀಸ್ ಠಾಣೆಗಳಲ್ಲಿ ಒಟ್ಟು 21 ಎಫ್.ಐ.ಆರ್ ದಾಖಲಾಗಿರುತ್ತವೆ. 2. ರಾಜ್ಯ ಸರ್ಕಾರವು ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿದ್ದು, ಪ್ರಸ್ತುತ ಎಲ್ಲಾ ಪ್ರಕರಣಗಳನ್ನು ಸಿಐಡಿ ವಿಚಾರಣೆ ನಡೆಸುತ್ತಿದೆ. | |
| 2 | ಗುರುಸಾರ್ವಭೌಮ ಸೌಹಾರ್ದ ಸಹಕಾರಿ ನಿ., ಬೆಂಗಳೂರು | ರೂ. 253,43,86,046/- | - | ರೂ. 253,43,86,046/- | ಸಹಕಾರಿಯಲ್ಲಿ ಅವ್ಯವಹಾರ ಕಂಡುಬಂದ ಪ್ರಾರಂಭದ ಹಂತದಲ್ಲಿಯೇ ಕೆ.ಪಿ.ಐ.ಡಿ ಕಾಯ್ದೆ-2004ರಡಿಯಲ್ಲಿ ಸಕ್ಷಮ ಪ್ರಾಧಿಕಾರಿಗಳಾಗಿ ಅಪರ ಪ್ರಾದೇಶಿಕ ಆಯುಕ್ತರು, ಶಾಂತಿನಗರ, ಬೆಂಗಳೂರು ಇವರು ನೇಮಕಗೊಂಡು ಆರೋಪಿತರ ಆಸ್ತಿಗಳನ್ನು ಜಪ್ತಿ ಮತ್ತು ಹರಾಜು ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸಹಕಾರಿಗೆ ಸಂಬಂಧಿಸಿದ ಆಪಾದಿತರ ಆಸ್ತಿಗಳ ವಿವರಗಳನ್ನು ಸಕ್ಷಮ ಪ್ರಾಧಿಕಾರಿಗಳಿಗೆ ಒದಗಿಸಲಾಗಿರುತ್ತದೆ. | | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 25 (4)ರಡಿ ಎಲ್ಲ ನಿರ್ದೇಶಕರಗಳನ್ನು ಅನರ್ಹಗೊಳಿಸಲಾಗಿದೆ. | ಸಹಕಾರಿಯ ಆಡಳಿತ ಮಂಡಲಿಯ ವಿರುದ್ಧ ಬೆಂಗಳೂರಿನ ಶಂಕರಪುರ ಪೋಲೀಸ್ ಠಾಣೆಗಳಲ್ಲಿ ಒಟ್ಟು 03 ಎಫ್.ಐ.ಆರ್ ದಾಖಲಾಗಿರುತ್ತವೆ. ಸದರಿ ಪ್ರಕರಣಗಳು ಸಿಐಡಿ ಮತ್ತು ಸಿಬಿಐಗೆ ವರ್ಗಾವಣೆಯಾಗಿರುತ್ತದೆ. | |
| 3 | ವಶಿಷ್ಠ ಸೌಹಾರ್ದ ಸಹಕಾರಿ ನಿ., ಬೆಂಗಳೂರು | ರೂ.79,01,30,550/- | - | ರೂ.79,01,30,550/- | ಸಹಕಾರಿಯಲ್ಲಿ ಅವ್ಯವಹಾರ ಕಂಡುಬಂದ ಪ್ರಾರಂಭದ ಹಂತದಲ್ಲಿಯೇ ಕೆ.ಪಿ.ಐ.ಡಿ ಕಾಯ್ದೆ-2004ರಡಿಯಲ್ಲಿ ಸಕ್ಷಮ ಪ್ರಾಧಿಕಾರಿಗಳಾಗಿ ಸಹಾಯಕ ಆಯುಕ್ತರು, ಹಾಗೂ ಸಕ್ಷಮ ಪ್ರಾಧಿಕಾರಿಗಳು, ವಿಶೇಷಾಧಿಕಾರಿಗಳು, ಸಕ್ಷಮ ಪ್ರಾಧೀಕಾರಿಗಳ ಕಛೇರಿ( ಐಎಮ್‌ಎ ಮತ್ತು ಇತರೆ ಕೆಪಿಐಡಿ ಪ್ರಕರಣಗಳು, ಬೆಂಗಳೂರು) ಇವರು ನೇಮಕಗೊಂಡು ಆರೋಪಿತರ ಆಸ್ತಿಗಳನ್ನು ಜಪ್ತಿ ಮತ್ತು ಹರಾಜು ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಸಹಕಾರಿಗೆ ಸಂಬಂಧಿಸಿದ ಆಪಾದಿತರ ಆಸ್ತಿಗಳ ವಿವರಗಳನ್ನು ಸಕ್ಷಮ ಪ್ರಾಧಿಕಾರಿಗಳಿಗೆ ಒದಗಿಸಲಾಗಿರುತ್ತದೆ. | | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 25 (4)ರಡಿ ಎಲ್ಲ ನಿರ್ದೇಶಕಗಳನ್ನು ಅನರ್ಹಗೊಳಿಸಲಾಗಿದೆ. | ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಮುಖ್ಯಕಾರ್ಯನಿರ್ವಾಹರು ಮತ್ತು ಸಾಲಗಾರರನ್ನು ಸೇರಿ ಒಟ್ಟು 56 ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ(ಎಫ್‌ಐಆರ್ ಸಂಖ್ಯೆ-0061/2022) ದಾಖಲಿಸಲಾಗಿರುತ್ತದೆ. ಸದರಿ ಸಹಕಾರಿಗಳಲ್ಲಿ ಬಹು ಕೋಟಿ ಅವ್ಯವಹಾರವಾಗಿರುವ ಹಿನ್ನಲೆಯಲ್ಲಿ ಸದರಿ ಸಹಕಾರಿಗಳ ಪ್ರಕರಣವನ್ನು ರಾಜ್ಯ ಸರ್ಕಾರವು ದಿನಾಂಕ:02.12.2023 ರಂದು ಸಿಬಿಐಗೆ ವರ್ಗಾಹಿಸಿರುತ್ತದೆ. | |
| 4 | ಶುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., ಬೆಂಗಳೂರು | ಸಹಕಾರಿಯ ವಿಚಾರಣಾ ವರದಿಯಲ್ಲಿ ಯಾವುದೇ ಹಣ ದುರುಪಯೋಗವಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ | | | | | | | |
| 5 | ಕಾಗಿನೆಲೆ ಕನಕಶ್ರೀ ಸೌಹಾರ್ದ ಕ್ರೆಡಿಟ್ ಕೋ- ಆಪರೇಟಿವ್ ಲಿ., ಬೆಂಗಳೂರು | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. | | | | | | | |
| 6 | ಆದಿತ್ಯ ವಿವಿದೋದ್ದೇಶ ಸೌಹಾರ್ದ ಸಹಕಾರ ನಿ., ಬೆಂಗಳೂರು | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. | | | | | | | |

| ಕ್ರ.ಸಂ | ಜಿಲ್ಲಾವಾರು ಸೌಹಾರ್ದ ಸಹಕಾರಿ ಸಂಘದ ಹೆಸರು | ಕಲಂ 35 ರಡಿ ವಿಚಾರಣಾ ವರಧಿಯಂತೆ ಹಣ ದುರುಪಯೋಗದ ಮೊತ್ತ | ದಿ: 30.11.2024ಕ್ಕೆ ಇದ್ದಂತೆ ವಸೂಲಾತಿಯ ಮೊತ್ತ | ವಸೂಲಾತಿಗೆ ಬಾಕಿ ಇರುವ ಮೊತ್ತದ ವಿವರ | ಹಣ ದುರುಪಯೋಗದ ಮೊತ್ತದ ವಸೂಲಾತಿಗೆ | | ಆಡಳಿತ ಮಂಡಳಿ ಸದಸ್ಯರ ವಿರುದ್ಧ ತೆಗೆದುಕೊಂಡ ಕ್ರಮ | ಆರೋಪಿತರ ವಿರುದ್ಧ ತೆಗೆದುಕೊಂಡ ಕ್ರಿಮಿನಲ್ ಕ್ರಮದ ವಿವರ | ಷರಾ |
|---|---|---|---|---|---|---|---|---|---|
| | | | | | ಕಲಂ 44 ರಡಿ ಜಪ್ತಿ ಮಾಡಿದ ಸ್ಥಿರಾಸ್ತಿಗಳ ವಿವರ | ಕಲಂ 37ಎ ರಡಿ ಅಧಿಭಾರ ಪ್ರಕರಣದ ವಿವರ | | | |
| 1 | 2 | 3 | 4 | 5 | 6 | 7 | 8 | 9 | 11 |
| 7 | ಅವಿಷ್ಕಾರ್ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪ್ ಲಿ., ತೀರ್ಥಹಳ್ಳಿ | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. | | | | | | | |
| 8 | ಸೆವೆನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ. | ರೂ. 10,92,11,722/- | - | ರೂ. 10,92,11,722/- | ಆರೋಪಿತರ ಕರ್ನಾಟಕ ರಾಜ್ಯದ 13 ಜಿಲ್ಲೆಯಲ್ಲಿನ 252 ಆಸ್ತಿಗಳ ಮೇಲೆ ಆದೇಶ ಪೂರ್ವ ಜಪ್ತಿಯನ್ನು ಪಡೆಯಲಾಗಿದೆ. | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ಪ್ರಕರಣ ದಾಖಲಿಸಿದ್ದು ವಿಚಾರಣೆ ಜಾರಿಯಲ್ಲಿದೆ. | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 25 (4)ರಡಿ ಎಲ್ಲ ನಿರ್ದೇಶಕಗಳನ್ನು ಅನರ್ಹಗೊಳಿಸಲಾಗಿದೆ. | ಠೇವಣಿದಾರರಿಂದ ಸಹಕಾರಿಯ ಆಡಳಿತ ಮಂಡಳಿಯ ವಿರುದ್ಧ ವಿವಿದ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ. ಮುಂದುವರೆದು ಸದರಿ ಪ್ರಕರಣವುಸಿಐಡಿ ಗೆ ವರ್ಗಾವಣೆಗೊಂಡು ಪ್ರಕರಣ ಚಾಲ್ತಿಯಲ್ಲಿರುತ್ತದೆ. | |
| 9 | ಶ್ರೀ ಆಶ್ರಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ | ರೂ.45,08,23,422/- | 2 ಕೋಟಿ ಮೊತ್ತವು ಸಮಾಪಕರ ಖಾತೆಗೆ ಜಮಾ ಆಗಿರುತ್ತದೆ.(ನ್ಯಾಯಾಲಯದ ಆದೇಶದಂತೆ ದಿ.31.03.2025 ರೊಳಗೆ ರೂ.6.25 ಕೋಟಿ ವಸೂಲು | ರೂ.43,08,23,422/- | 01 ಆರೋಪಿಯ 01 ಆಸ್ತಿಯ ಮೇಲೆ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ. | ಸೌಹಾರ್ದ ದಾವಾ ಪಂಚಾಯಿತಿ ನ್ಯಾಯಾಲಯ-441(ನಿ) ರಲ್ಲಿ ಸಂಯುಕ್ತ ಸಹಕಾರಿಯಿಂದ 14 ಆರೋಪಿತರ ವಿರುದ್ಧ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಲಾಗಿರುತ್ತದೆ. | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 25 (4)ರಡಿ ಎಲ್ಲ ನಿರ್ದೇಶಕಗಳನ್ನು ಅನರ್ಹಗೊಳಿಸಲಾಗಿದೆ. | | |
| 10 | ಶ್ರೀ ಭೀಮಾಂಬಿಕ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ. | ರೂ. 41,62,51,818/- | - | ರೂ. 41,62,51,818/- | 14 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ. 41,62,51,818/-ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿರುತ್ತದೆ. ಪ್ರಕರಣದ ವಿಚಾರಣೆ ಪ್ರಗತಿಯಲ್ಲಿರುತ್ತದೆ. | | ಸಕ್ಷಮ ಪ್ರಾಧಿಕಾರಿಗಳು ನೇಮಕ ಆಗಿರುತ್ತಾರೆ. | ಸಹಕಾರಿಯ ಆಡಳಿತ ಮಂಡಲಿಯ ವಿರುದ್ಧ ಬೆಳಗಾವಿಯ ಖಡೆಬಜಾರ್ ಪೋಲೀಸ್ ಠಾಣೆಯಲ್ಲಿ ಸಂಯುಕ್ತ ಸಹಕಾರಿಯಿಂದ 01 ಎಫ್.ಐ.ಆರ್ ದಾಖಲಾಗಿರುತ್ತವೆ. | |
| 11 | ಗಜರಾಜ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ | ರೂ.14,45,35,420/- | - | ರೂ.14,45,35,420/- | 12 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ.14,45,35,420/-ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿರುತ್ತದೆ. ಪ್ರಕರಣದ ವಿಚಾರಣೆ ಪ್ರಗತಿಯಲ್ಲಿರುತ್ತದೆ. | | ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿಲ್ಲ | ಸಹಕಾರಿಯ ಆಡಳಿತ ಮಂಡಲಿಯ ವಿರುದ್ಧ ಬೆಳಗಾವಿಯ ಖಡೆಬಜಾರ್ ಪೋಲೀಸ್ ಠಾಣೆಯಲ್ಲಿ ಠೇವಣಿದಾರರಿಂದ 01 ಎಫ್.ಐ.ಆರ್ ದಾಖಲಾಗಿರುತ್ತವೆ. | |
| 12 | ಶ್ರೀ ಕಪಿಲನಾಥ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ. | ರೂ.84,01,973/- | - | ರೂ.84,01,973/- | 02 ಆರೋಪಿತರ ವಿರುದ್ಧಅವ್ಯವಹಾರ ಮೊತ್ತ ರೂ.84,01,973/-ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಬಾರ ಪ್ರಕರಣ ದಾಖಲಿಸಿ ಐತೀರ್ಪು ಪಡೆಯಲಾಗಿದ್ದು ಅಮಲ್ಜಾರಿ ದಾಖಲಿಸುವ ಹಂತದಲ್ಲಿರುತ್ತದೆ. | | ಸಮಾಪನಾಧಿಕಾರಿಗಳು ನೇಮಕ ಆಗಿರುತ್ತಾರೆ. | | |

| ಕ್ರ.ಸಂ | ಜಿಲ್ಲಾವಾರು ಸೌಹಾರ್ದ ಸಹಕಾರಿ ಸಂಘದ ಹೆಸರು | ಕಲಂ 35 ರಡಿ ವಿಚಾರಣಾ ವರಧಿಯಂತೆ ಹಣ ದುರುಪಯೋಗದ ಮೊತ್ತ | ದಿ: 30.11.2024ಕ್ಕೆ ಇದ್ದಂತೆ ವಸೂಲಾತಿಯ ಮೊತ್ತ | ವಸೂಲಾತಿಗೆ ಬಾಕಿ ಇರುವ ಮೊತ್ತದ ವಿವರ | ಹಣ ದುರುಪಯೋಗದ ಮೊತ್ತದ ವಸೂಲಾತಿಗೆ | | ಆಡಳಿತ ಮಂಡಳಿ ಸದಸ್ಯರ ವಿರುದ್ಧ ತೆಗೆದುಕೊಂಡ ಕ್ರಮ | ಆರೋಪಿತರ ವಿರುದ್ಧ ತೆಗೆದುಕೊಂಡ ಕ್ರಿಮಿನಲ್ ಕ್ರಮದ ವಿವರ | ಷರಾ |
|---|---|---|---|---|---|---|---|---|---|
| | | | | | ಕಲಂ 44 ರಡಿ ಜಪ್ತಿ ಮಾಡಿದ ಸ್ಥಿರಾಸ್ತಿಗಳ ವಿವರ | ಕಲಂ 37ಎ ರಡಿ ಅಧಿಭಾರ ಪ್ರಕರಣದ ವಿವರ | | | |
| 1 | 2 | 3 | 4 | 5 | 6 | 7 | 8 | 9 | 11 |
| 13 | ದಿ ಬೆಳಗಾವಿ ಲಿಬರಲ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ. | ರೂ.1,39,88,994/- | - | ರೂ.1,39,88,994/- | 01 ಆರೋಪಿಯ 03 ಆಸ್ತಿಯ ಮೇಲೆ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ. | ಸಂಯುಕ್ತ ಸಹಕಾರಿಯಿಂದ 12 ಆರೋಪಿತರ ವಿರುದ್ಧ ಅವ್ಯವಹಾರ ಮೊತ್ತ ರೂ.1,39,88,994/-ರ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 37ಎ ರಡಿ ಅಧಿಭಾರ ಪ್ರಕರಣ | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 25 (4)ರಡಿ ಎಲ್ಲ ನಿರ್ದೇಶಕರನ್ನು ಅನರ್ಹಗೊಳಿಸಲಾಗಿದೆ. | | |
| 14 | ಶ್ರೀ ಬಸವೇಶ್ವರ ವಿವಿಧ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ | ಸಹಕಾರಿಯ ವಿಚಾರಣಾ ಪ್ರಕ್ರಿಯೇ ಪ್ರಗತಿಯಲ್ಲಿರುತ್ತದೆ. | | | | | | | |
| 15 | ಶ್ರೀ ಬಾಲಾಜಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಕಂಗ್ರಾಳಿ, ಕೆ.ಎಚ್. ಬೆಳಗಾವಿ | ಸಹಕಾರಿಯ ವಿಚಾರಣಾ ವರದಿಯ ಆಧಾರದ ಮೇಲೆ ಪ್ರಕ್ರಿಯೇ ಪ್ರಗತಿಯಲ್ಲಿರುತ್ತದೆ. | | | | | | | |
| 16 | ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ | ಸಹಕಾರಿಯ ವಿಚಾರಣಾ ಪ್ರಕ್ರಿಯೇ ಪ್ರಗತಿಯಲ್ಲಿರುತ್ತದೆ. | | | | | | | |
| 17 | ಶ್ರೀ ಅರಿಹಂತ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗಂದಿಗವಾಡ | ರೂ.73,91,215/- | - | ರೂ.73,91,215/- | ವಿಚಾರಣಾ ವರದಿಯ ಆಧಾರದ ಮೇಲೆ ಸೌಹಾರ್ದ ಕಾಯ್ದೆ ಕಲಂ 37ರಡಿಯಲ್ಲಿ ಅಧಿಭಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಸಂಯುಕ್ತ ಸಹಕಾರಿಯಿಂದ ನೋಟಿಸ್ ಜಾರಿ ಮಾಡಲಾಗಿದೆ. | | ದಿನಾಂಕ 22.02.2020 ರಂದು ನೂತನ ಆಡಳಿತ ಮಂಡಲಿ ರಚನೆಯಾಗಿರುತ್ತದೆ. | | |
| 18 | ಶ್ರೀ ನಾಗನೂರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಾಗನೋರ ತಾ: ಗೋಕಾಕ | ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡದಲ್ಲಿ ರಿಟ್ ಪಿಟಿಷನ್ ಸಂಖ್ಯೆ 102280/2024ರನ್ನು ದಾಖಲಿಸಿ ವಿಚಾರಣಾ ವರದಿಯ ಮೇಲಿನ ಕ್ರಮಕ್ಕೆ ತಡೆಯಾಜ್ಞೆ ತಂದಿರುತ್ತಾರೆ. | | | | | | | |
| 19 | ಸಂಕಲ್ಪ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. | | | | | | | |
| 20 | ಶ್ರೀ ಷಡಕ್ಷರಿ ಶಿವಯೋಗಿ ಸಿದ್ಧರಾಮೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ. ಬೆಳಗಾವಿ | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. | | | | | | ಬೆಳಗಾವಿ ಜಿಲ್ಲೆಯ ಸಂಕೇಶ್ವರ ಪೋಲಿಸ್ ಠಾಣೆಯಲ್ಲಿ ಒಂದು ಎಫ್.ಐ ಆರ್ ದಾಖಲಾಗಿರುತ್ತದೆ. | |
| 21 | ಕಿತ್ತೂರು ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಬೈಲಹೊಂಗಲ | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. | | | | | | | |
| 22 | ಎಸ್.ಎಮ್.ಎನ್. ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. | | | | | | ಠಾಣೆಯಲ್ಲಿ ಒಂದು ಎಫ್.ಐ ಆರ್ | |
| 23 | ಶ್ರೀ ನಿಧಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮುಂಡಗೋಡ. ಜಿ॥ ಉತ್ತರ ಕನ್ನಡ | ಶೇರುದಾರರ ಹಣವನ್ನು ಮರುಪಾವತಿ ಮಾಡುತ್ತಿಲ್ಲವೆಂಬ ದೂರಿನ ಆಧಾರದ ಮೇಲೆ ವಿಚಾರಣೆಯನ್ನು ಕೈಗೊಳ್ಳಲಾಗಿತ್ತು. ವಿಚಾರಣಾ ವರದಿಯ ಆಧಾರದ ಮೇಲೆ ದೂರುದಾರರಿಗೆ ರೂ.1,00,000/- ಶೇರು ಹಣವನ್ನು ಮರುಪಾವತಿ ಮಾಡಲಾಗಿರುತ್ತದೆ. | | | | | | | |
| 24 | ಮಜಲಿಸ್ ಎ-ಮಿಲ್ಲತ್ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪೂರ | ಸಹಕಾರಿಯ ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ | | | | | | | |

| ಕ್ರ.ಸಂ | ಜಿಲ್ಲಾವಾರು ಸೌಹಾರ್ದ ಸಹಕಾರಿ ಸಂಘದ ಹೆಸರು | ಕಲಂ 35 ರಡಿ ವಿಚಾರಣಾ ವರಧಿಯಂತೆ ಹಣ ದುರುಪಯೋಗದ ಮೊತ್ತ | ದಿ: 30.11.2024ಕ್ಕೆ ಇದ್ದಂತೆ ವಸೂಲಾತಿಯ ಮೊತ್ತ | ವಸೂಲಾತಿಗೆ ಬಾಕಿ ಇರುವ ಮೊತ್ತದ ವಿವರ | ಹಣ ದುರುಪಯೋಗದ ಮೊತ್ತದ ವಸೂಲಾತಿಗೆ | | ಆಡಳಿತ ಮಂಡಳಿ ಸದಸ್ಯರ ವಿರುದ್ಧ ತೆಗೆದುಕೊಂಡ ಕ್ರಮ | ಆರೋಪಿತರ ವಿರುದ್ಧ ತೆಗೆದುಕೊಂಡ ಕ್ರಿಮಿನಲ್ ಕ್ರಮದ ವಿವರ | ಷರಾ |
|---|---|---|---|---|---|---|---|---|---|
| | | | | | ಕಲಂ 44 ರಡಿ ಜಪ್ತಿ ಮಾಡಿದ ಸ್ಥಿರಾಸ್ತಿಗಳ ವಿವರ | ಕಲಂ 37ಎ ರಡಿ ಅಧಿಭಾರ ಪ್ರಕರಣದ ವಿವರ | | | |
| 1 | 2 | 3 | 4 | 5 | 6 | 7 | 8 | 9 | 11 |
| 25 | ಮಹಾತ್ಮಗಾಂದಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್. | ಸಹಕಾರಿಯ ವಿಚಾರಣಾ ವರದಿಯಲ್ಲಿ ಸಹಕಾರಿಯು ಒಟ್ಟು ರೂ.78,48,49,722/-ಠೇವಣಿಯನ್ನು ಹೊಂದಿದ್ದು ಇದರ ಶೇ.95.17ರಷ್ಟು ಠೇವಣಿಯನ್ನು ಸಹಕಾರಿಯು ಸಾಲ ಮತ್ತು ಮುಂಗಡದ ಮೂಲಕ ನೀಡಿ ಆಡಳಿತ ಮಂಡಲಿಯು ಅಧಿಕಾರ ದುರುಪಯೋಗ ಮಾಡಿಕೊಂಡು ನಿಯಮಗಳ ಉಲ್ಲಂಘನೆಯಾಗಿರುತ್ತದೆ. | | | | | | | |
| 26 | ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ | ವಿಚಾರಣಾ ವರದಿ ಪ್ರಕಾರ ಸಹಕಾರಿಯಲ್ಲಿ ಯಾವುದೇ ಹಣಕಾಸಿನ ಅವ್ಯವಹಾರವಾಗಿರುವುದು ಕಂಡುಬಂದಿರುವುದಿಲ್ಲ. ಆದರೆ ನಿಯಮಗಳ ಉಲ್ಲಂಘನೆಯಾಗಿರುತ್ತದೆ. | | | | | | | |
| 27 | ಶ್ರೀ ಪರಿಮಳ ಪತ್ತಿನ ಸೌಹಾರ್ದ ಸಹಕಾರಿ ನಿ., ಕಾರಟಗಿ | ವಿಚಾರಣಾ ವರದಿ ಪ್ರಕಾರ ಕರ್ನಾಟಕ ಉಚ್ಚನ್ಯಾಯಾಲಯ, ಧಾರವಾಡ ಇದರ ರಿಟ್ ಪಿಟಿಷನ್ ಸಂಖ್ಯೆ: 147277/2020 ಆದೇಶದಂತೆ ಪ್ರಕರಣ ಮುಕ್ತಾಯವಾಗಿರುತ್ತದೆ. ವಿಚಾರಣಾ ವರದಿಯ ಪ್ರಕಾರ ಸಹಕಾರಿಯು ಸಾಲ ವಿತರಣೆಯಲ್ಲಿ ಆಡಳಿತ ಮಂಡಲಿಯು ಅಧಿಕಾರ ದುರುಪಯೋಗ ಮಾಡಿಕೊಂಡು ನಿಯಮಗಳ ಉಲ್ಲಂಘನೆಯಾಗಿರುತ್ತದೆ. | | | | | | | |
| 28 | ವಾಸವಿ ಪತ್ತಿನ ಸೌಹಾರ್ದ ಸಹಕಾರಿ ನಿ., ಕಾರಟಗಿ | ವಿಚಾರಣಾ ವರದಿಯು ಸ್ವೀಕಾರಗೊಂಡಿದ್ದು ವಿಚಾರಣಾ ವರದಿಯ ಮೇಲೆಅನುಪಾಲನೆಯನ್ನು ಸಲ್ಲಿಸುವಂತೆ ಮಾನ್ಯ ಸಹಕಾರಿಗಳ ಉಪನಿಬಂಧಕರು ಕೊಪ್ಪಳ ಇವರು ಸಹಕಾರಿಯ ಮುಖ್ಯಕಾರ್ಯನಿರ್ವಹಕರಿಗೆ ಸೂಚಿರುತ್ತಾರೆ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹ ವಿಚಾರಣಾ ವರದಿಯಲ್ಲಿ ಉಲ್ಲೇಖಿಸಿರುವ ನ್ಯೂನತೆಗಳಿಗೆ ಸಂಬಂದಿಸಿದಂತೆ ಅನುಪಾಲನೆಯನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸಹಕಾರಿಯ ಮುಖ್ಯಕಾರ್ಯನಿರ್ವಹಕರಿಗೆ ಸೂಚಿಲಾಗಿರುತ್ತದೆ. ವಿಚಾರಣಾ ವರದಿ ಪ್ರಕಾರ ಸಹಕಾರಿಯು ಆಡಳಿತ ಮಂಡಲಿಯು ಅಧಿಕಾರ ದುರುಪಯೋಗ ಮಾಡಿಕೊಂಡು ಸಾಲ ವಸೂಲಾತಿ ಸಂದಭದಲ್ಲಿ ನಿಯಮಗಳ ಉಲ್ಲಂಘನೆಯಾಗಿರುತ್ತದೆ. | | | | | | | |